ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಪಕ್ಕದಲ್ಲಿ ಕುಳಿತಿರುವವರನ್ನೇ ಕೇಳಿ, ಅವರು ನಿಮಗಿಂತ ಬಡವರು ಎಂಬುದಾಗಿ ಹೇಳುತ್ತಾರೆ. ವರುಣಾ ನಾಲೆಗೆ ಶಂಕುಸ್ಥಾಪನೆ ಮಾಡಿದ ತಕ್ಷಣವೇ ಅವರಿಗೆ ನೀರು ಬಂತೇ ? ತಾವು ಹೇಳುವುದಕ್ಕೆ ನಮ್ಮ ವಿರೋಧವೇನೂ ಇಲ್ಲ. ಎಲ್ಲವನ್ನೂ ತಿಳಿದೇ ಏನಾದರೂ ಆಗಲಿ ಎಂಬುದಾಗಿ ಶಂಕುಸ್ಥಾಪನೆಯನ್ನು ಹಾಕಿರತಕ್ಕಂಥಾದ್ದು. ಪಣ ಒದಗಿಸುವ ವಿಚಾರದಲ್ಲಿ ನೋಡೋಣ. ೧೯೮೫-೮೪ನೇ ವರ್ಷಕ್ಕೆ ಮುಗಿಸುತ್ತೇವೆಂದು ಆಶೆಯನ್ನು ಇಟ್ಟಿದ್ದೇವೆ. ಅದಕ್ಕಿಂತ ಮುಂಚೆ ಮುಗಿದರೂ ಸಂತೋಷ. ಎರಡು ವರ್ಷಗಳಲ್ಲಿ ಮುಗಿಸುತ್ತೇವೆಂದು ಸುಮ್ಮನೆ ನಿಮಗೆ ಆಸೆ ತೋರಿಸಬಾರದು Rs. 10 crores is not a small amount. It started with Rs. one crore; it went to Rs. 2 crores, Rs. 3 crores and finally it come upto Rs. 10 crores. Nevertheless ಅದು ಮುಗಿಯುವುದರೊಳಗೆ ಇನ್ನೂ ಎರಡು ಕೋಟಿ ರೂಪಾಯಿ ಜಾಸ್ತಿಯಾದರೂ ಆಗಬಹುದು. ಈಗಿನ ಪ್ರಕಾರ ೨೦,೦೫೦ ಎಕರೆ ನೀರಾವರಿಗೆ ಪ್ರಯೋಜನವಾಗುವುದಾದರೆ ಅದಕ್ಕೆ ನಾನು ಸಂತೋಷ ಪಡುತ್ತೇನೆ. but let me see, Next time I will try to provide more funds. This year, it was not possible; why, because ಹೇಮಾವತಿ, ಹಾರಂಗಿ ಪ್ರಾಜೆಕ್ಟ್‌ಗಳೂ ಇನ್ನೂ ಮುಗಿದಿಲ್ಲ. ಈ ವರ್ಷ ಮುಗಿಯುತ್ತವೆ. ಅದೂ ಡ್ಯಾಂ ಮಾತ್ರ ಮುಗಿಯುತ್ತವೆ. ಇನ್ನು ನಾಲೆಗಳನ್ನು ತೆಗೆದು ಕೂಂಡರೆ ಅವಕ್ಕೆ ಇನ್ನೂ ನಾಲ್ಕರಷ್ಟು ದುಡ್ಡು ಬೇಕು. ಆದ್ದರಿಂದ ತಾವು ದೊಡ್ಡಮನಸ್ಸು ಮಾಡಿ ಸರ್ಕಾರಕ್ಕೆ ಜನರು ಕೊಡಬೇಕಾದಂತಹ ಸಾಲದ ವಸೂಲಿ, ನೀರಿನ ಕಂದಾಯ, ಬೆಟರ್‌ಮೆಂಟ್ ಲೆವಿಯನ್ನು ಕೊಡಿಸಿಕೊಡುವುದಕ್ಕೆ ಸಹಾಯ ಮಾಡಿ. ಕೆಲವು ಸ್ನೇಹಿತರಿದ್ದಾರೆ ಘಟಪ್ರಭಾ, ತುಂಗಭದ್ರ, ಮಲಪ್ರಭಾ ಈ ಏರಿಯಾಗಳಲ್ಲಿ ಬೆಟರ್‌ಮೆಂಟ್ ಲೆವಿ ಜಾಸ್ತಿಯಾಗಿದೆ ಎಂದು ನನ್ನ ಮೇಲೆ ಗುದ್ದಾಟ ಮಾಡುವುದಕ್ಕೆ ಬರುತ್ತಾರೆ. ಯಾವುದನ್ನೂ ಕೊಡದೆ 'ಮಾಡಿ, ಮಾಡಿ' ಎಂಬುದಾಗಿ ಹೇಳಿದರೆ ಏನು ಮಾಡೋಣ ? ಸುಮ್ಮನೆ ಅಂಗೈನಲ್ಲಿ ಆಕಾಶವನ್ನು ತೋರಿಸೋಣವೇ ?

I will try to see that it is taken up and completed early. Even if it is going to be completed by 1983-84, you must be thankful to the Government.

ಶ್ರೀ ಎಂ. ವಿ. ರಾಜಶೇಖರನ್.—ಕಂದಾಯವನ್ನು ವಸೂಲಿ ಮಾಡುವುದಕ್ಕೆ ನೀರು ಕಂದಾಯವನ್ನು ವಸೂಲಿ ಮಾಡುವುದಕ್ಕೆ, ಹಾಗೂ ಬೆಟರ್‌ಮೆಂಟ್ ಲೆವಿಯನ್ನು ವಸೂಲಿ ಮಾಡುವುದಕ್ಕೆ ನಾವು ಸಹಾಯ ಮಾಡುತ್ತೇವೆ. ಅದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ನನ್ನ ಕಳಕಳಿ ಏನೆಂದರೆ ಸರ್ಕಾರದ ದುಂದು ವೆಚ್ಚವನ್ನು ಕಡಿಮೆ ಮಾಡಿದರೆ ಅದರಿಂದ ಬೇಕಾದಷ್ಟು ಕೆರೆಕಟ್ಟೆಗಳನ್ನು ಕಟ್ಟಬಹುದು. ಇದರ ಕಡೆಗೆ ಹೆಚ್ಚು ಗಮನವನ್ನು ಕೊಡಿ.

ಶ್ರೀ ಡಿ. ದೇವರಾಜ ಅರಸ್.—ಈಗ ತಮಗೆ ಅವಕಾಶ ಇದೆ. ಏನು ದುಂದು ವೆಚ್ಚ ಆಗಿದೆ ಅದನ್ನು ಹೇಳಿ. ಯಾವುದು ದುಂದು ವೆಚ್ಚ, ಯಾವುದನ್ನು ನಿಲ್ಲಿಸಬೇಕೆಂದು ಹೇಳಿ ಎಂದರೆ ಒಬ್ಬರೂ ಹೇಳಲಿಲ್ಲ ?

Institutions run by the Basaveswar Vidya Vardhaka Sangha Bagalkot.

201 SRI S. S. ARAKERI (Balloli).—Will the Minister for Education be pleased to state.—

(a) the total number of Colleges of Arts, Science, Commerce and Engineering etc., that are being run by the Basaveshwar Vidya Vardhska Sangha, Bagalkot ;

(b) the total strength of the teaching staff in these colleges including those in Polytechnic Schools and Colleges being run by the Sangha ;

(c) the strength of SC and ST employees in these colleges in teaching staff and in the establishment of the college and their percentage respectively?

SRI B. SUBBAYYASHETTY (Minister for Education)

(a) Five

(b) 107.

(c)

	SC	ST	Percentage
Teaching Staff	Nil	Nil	Nil
Non-Teaching Staff	12	Nil	8.05

ಶ್ರೀ ಎಸ್. ಎಸ್, ಅರಕೇರಿ—ಸ್ವಾಮಿ, ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ೫ ಎಂದು ಹೇಳಿದ್ದೀರಿ. ಇವು ಎಷ್ಟು ವರ್ಷಗಳಿಂದ ನಡೆಯುತ್ತಾ ಇದೆ? ಮತ್ತು ಇವಕ್ಕೆ ಎಷ್ಟು ವರ್ಷದಿಂದ ಸಹಾಯ ಧನವನ್ನು ಕೊಡುತ್ತಾ ಇದ್ದೀರಿ ಮತ್ತು ಎಷ್ಟು ಪರ್ಸೆಂಟೇಜ್ ಅಷ್ಟು ಕಾಲೇಜುಗಳಿಗೆ ಕೊಡುತ್ತಾ ಇದ್ದೀರಿ ?

†ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಬಾಗಲಕೋಟೆಯ ಬಸವೇಶ್ವರ ವಿದ್ಯಾ ವರ್ಧಕ ಸಂಘದವರು ೫ ಕಾಲೇಜುಗಳನ್ನು ರನ್ ಮಾಡುತ್ತಾ ಇದ್ದಾರೆ. ಆ ೫ ಕಾಲೇಜುಗಳಲ್ಲಿ (೧)ಬಸವೇಶ್ವರ ಆರ್ಟ್ಸ್ ಕಾಲೇಜಿನಲ್ಲಿ ಟೀಚಿಂಗ್ ಸ್ಟಾಫ್‌ನಲ್ಲಿ ೨೩ ಜನ ಇದ್ದಾರೆ, ನಾನ್ ಟೀಚಿಂಗ್ ಸ್ಟಾಫ್‌ನಲ್ಲಿ ೧೯ ಇದ್ದಾರೆ. ಆ ಟೀಚಿಂಗ್ ಸ್ಟಾಫ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಯಾರೂ ಇಲ್ಲಾ ನಾನ್ ಟೀಚಿಂಗ್ ಸ್ಟಾಫ್‌ನಲ್ಲಿ ಒಂದು ಷೆಡ್ಯೂಲ್ಡ್ ಕ್ಯಾಸ್ಟ್ ಇದ್ದಾರೆ. ಆನಂತರ (೨) ಬಸವೇಶ್ವರ ಸೈನ್ಸ್ ಕಾಲೇಜಿನಲ್ಲಿ ಟೀಚಿಂಗ್ ಅಂಡ್ ನಾನ್ ಟೀಚಿಂಗ್ ಸ್ಟಾಫ್‌ಗಳಲ್ಲಿ ೨೭–೨೭ ಇದ್ದಾರೆ, ಅದರಲ್ಲಿ ಟೀಚಿಂಗ್ ಸ್ಟಾಫ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನ ಯಾರೂ ಇಲ್ಲಾ. ನಾನ್ ಟೀಚಿಂಗ್ ಸ್ಟಾಫ್‌ನಲ್ಲಿ ಒಂದು ಷೆಡ್ಯೂಲ್ಡ್ ಕ್ಯಾಸ್ಟ್‌ನ ಇದ್ದಾರೆ. ಆನಂತರ (೩) ಬಸವೇಶ್ವರ ಕಾಮರ್ಸ್ ಕಾಲೇಜಿನಲ್ಲಿ ಟೀಚಿಂಗ್ ಸ್ಟಾಫ್ ೧೩ ಇದ್ದಾರೆ, ನಾನ್ ಟೀಚಿಂಗ್ ಸ್ಟಾಫ್‌ನಲ್ಲಿ ೧೩ ಜನ ಇದ್ದಾರೆ. ಅದರಲ್ಲಿ ಟೀಚಿಂಗ್ ಸ್ಟಾಫ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನ ಯಾರೂ ಇಲ್ಲಾ, ನಾನ್ ಟೀಚಿಂಗ್ ಸ್ಟಾಫ್‌ನಲ್ಲಿ ೨ ಷೆಡ್ಯೂಲ್ಡ್ ಕ್ಯಾಸ್ಟ್‌ನ ಇದ್ದಾರೆ. ಆನಂತರ (೪) ಬಸವೇಶ್ವರ ಎಂಜಿನೀಯರಿಂಗ್ ಕಾಲೇಜಿನಲ್ಲಿ ಟೀಚಿಂಗ್ ಸ್ಟಾಫ್‌ನಲ್ಲಿ ೩೪ ಜನ ಇದ್ದಾರೆ ನಾನ್ ಟೀಚಿಂಗ್ ಸ್ಟಾಫ್‌ನಲ್ಲಿ ೭೫ ಜನ ಇದ್ದಾರೆ. ಟೀಚಿಂಗ್ ಸ್ಟಾಫ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನ ಯಾರೂ ಇಲ್ಲಾ. ನಾನ್ ಟೀಚಿಂಗ್ ಸ್ಟಾಫ್‌ನಲ್ಲಿ ೬ ಜನ ಷೆಡ್ಯೂಲ್ಡ್ ಕ್ಯಾಸ್ಟ್‌ನ ಇದ್ದಾರೆ. ಆನಂತರ ಬಸವೇಶ್ವರ ಪಾಲಿಟೆಕ್ನಿಕ್‌ನಲ್ಲಿ ಟೀಚಿಂಗ್ ಸ್ಟಾಫ್ ೧೦ ಜನ ಇದ್ದಾರೆ, ನಾನ್ ಟೀಚಿಂಗ್ ಸ್ಟಾಫ್ ೧೫ ಜನ ಇದ್ದಾರೆ. ಟೀಚಿಂಗ್ ಸ್ಟಾಫ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನ ಯಾರೂ ಇಲ್ಲಾ, ನಾನ್ ಟೀಚಿಂಗ್ ಸ್ಟಾಫ್‌ನಲ್ಲಿ ಇಬ್ಬರು ಇದ್ದಾರೆ.

ಶ್ರೀ ಎಸ್. ಎಸ್. ಅರಕೇರಿ. ಅವಕ್ಕೆಲ್ಲಾ ಸರಕಾರ ಧನ ಸಹಾಯ ಕೊಡುತ್ತೀರಾ? ಕೊಡುವುದಾದರೆ ಅವುಗಳಿಗೆ ಎಷ್ಟು ವರ್ಷದಿಂದ ಕೊಡುತ್ತಿದ್ದೀರಾ ಮತ್ತು ಎಷ್ಟು ಪರ್ಸೆಂಟೇಜ್ ಕೊಡುತ್ತಿದ್ದೀರಾ? ಮತ್ತು ೧೦೭ ಟೀಚಿಂಗ್ ಸ್ಟಾಫ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನ ಯಾರೂ ಇಲ್ಲಾ. ಕಳೆದ ೧೬ ವರ್ಷಗಳಿಂದಲೂ ಕೂಡ ಸರ್ಕಾರ ಈ ಬಗ್ಗೆ ಏನೂ ಆದೇಶ ಕೊಟ್ಟಿರಲಿಲ್ಲವೇ ಕೊಡದೇ ಹೋದರೆ ಏತಕ್ಕೆ ಕೊಡಲಿಲ್ಲಾ? ಅವರು ಒಂದು ವೇಳೆ ಸರ್ಕಾರ ಕೊಟ್ಟ ಆದೇಶವನ್ನು ಪರಿಪಾಲಿಸದೇ ಹೋಗಿದ್ದಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಅನ್ನುವುದನ್ನು ತಿಳಿಸುತ್ತೀರಾ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ;—ಸರ್ಕಾರ ಆವಕ್ಕೆ ಗ್ರಾಂಟ್ ಕೊಡುತ್ತಾ ಇದೆ. ಗ್ರಾಂಟ್ ಕೊಡುವ ಶಾಲೆಗಳಲ್ಲಿ ರಿಸರ್ವೇಷನ್ ರೂಲ್ಸ್ ಏನು ಇದೆ ಆ ಪ್ರಕಾರ ಅವರು ಪಾಲಿಸಲೇ ಬೇಕು. ಈ ಆಜ್ಞೆ ೪-೩-೭೭ ರಿಂದ ಇದೆ ಅದರ ಮೊದಲು ರಿಸರ್ವೇಷನ್ ರೂಲ್ ಇತ್ತೋ ಇರಲಿಲ್ಲವೋ. ಒಟ್ಟಿನಲ್ಲಿ ರೆಕ್ರೂಟ್‌ಮೆಂಟ್ ಅನ್ನು ಆ ಮ್ಯಾನೇಜ್‌ಮೆಂಟಿನವರೇ ಮಾಡುತ್ತಾ ಇದ್ದರು. ಆ ರೆಕ್ರೂಟ್‌ಮೆಂಟ್ ಕಮಿಟಿಯಲ್ಲಿ ಸರ್ಕಾರದ ಒಂದು ನಾಮಿನಿ ಈಗ ಇರುವುದರಿಂದ ಅವರು ರಿಸರ್ವೇಷನ್ ರೂಲ್ಸ್ ಏನು ಇದೆಯೋ ಅದನ್ನು ಪರಿಪಾಲಿಸಲೇಬೇಕು, ಅವರು ಇದನ್ನು ನೋಡಿಕೊಳ್ಳುತ್ತಿದ್ದಾರೆ.

ಶ್ರೀ ಎಸ್. ಎಸ್. ಆರಕೇರಿ:—ಈ ಸಂಸ್ಥೆಯಲ್ಲಿ ಒಟ್ಟು ೧೦೭ ಜನ ಸ್ಟ್ರೆಂತ್ ಇದ್ದಾರೆ. ಅದರಲ್ಲಿ ಒಬ್ಬರೂ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಇರದೆ ಇರುವುದರಿಂದ ಇದು ಸಂವಿಧಾನ ಬಾಹಿರವಾಹಿರವಾಗಿರುವುದರಿಂದ ಈ ಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ

ಶ್ರೀ ಬಿ. ಸಬ್ಬಯ್ಯ ಶೆಟ್ಟಿ.—ಇದರಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಅಂತಲೂ ಇದೆ. ಅಲ್ಲದೆ ಇಲ್ಲಿ ಹೆಚ್ಚು ವೆಕೆನ್ಸಿಗಳೂ ಇಲ್ಲ ಮತ್ತು ಮೊದಲು ಈ ಬಗ್ಗೆ ರೆಕ್ರೂಟ್‌ಮೆಂಟ್ ಅನ್ನು ಮ್ಯಾನೇಜ್ ಮೆಂಟ್ ನವರೇ ಮಾಡಿದ್ದಾರೆ. ಈಗ ಏನಾದರೂ ರೆಕ್ರೂಟ್ ಮಾಡಬೇಕಾದರೆ ಆ ರಿಸರ್ವೇಷನ್ ರೂಲ್ಸನ್ನು ಅಬ್ಸರ್ವೇಷನ್ ಮಾಡಿಸುತ್ತೇನೆ.

ಇನ್ನು ಎರಡನೆಯದಾಗಿ ಇದರಲ್ಲಿ ಬಂದಿರುವ ದೂರು ಏನೆಂದರೆ ಈ ಪ್ರೈವೇಟ್ ಶಾಲೆಗಳಿಗೆ ಅಷ್ಟು ಹೆಚ್ಚಾಗಿ ಎಸ್. ಸಿ. ಅಂಡ್ ಎಸ್. ಟಿ. ಅಭ್ಯರ್ಥಿಗಳು ಅರ್ಜಿ ಹಾಕುವುದಿಲ್ಲ ಅಂತ ಬಂದಿದೆ. ಆದರೂ ಕೂಡ ಇದರಲ್ಲಿ ಸರ್ಕಾರದ ಒಂದು ನಾಮಿನಿ ಇರುವುದರಿಂದ ಈ ಬಗ್ಗೆ ರಿಸರ್ವೇಷನ್ ರೂಲ್ಸ್ ಏನು ಇದೆಯೋ ಅದನ್ನು ಸ್ಟ್ರಿಕ್ಟ್ ಆಗಿ ಪಾಲಿಸುತ್ತಾರೆ ಅನ್ನುವ ನಂಬಿಕೆ ನನಗೆ ಇದೆ.

ಶ್ರೀ ಎಸ್. ಎಸ್. ಆರಕೇರಿ.—ಇನ್ನು ಮುಂದಾದರೂ ಕೂಡ ಈ ಪ್ರೈವೇಟ್ ಕಾಲೇಜಸ್‌ನವರು ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಪ್ರೈವೇಟ್ ಕಾಲೇಜುಗಳು ಇವೆ ಅವರು ಎಸ್. ಸಿ ಮತ್ತು ಎಸ್. ಟಿ. ಗೆ ಸರಿಯಾದ ಪರ್ಸೆಂಟೇಜ್ ಕೊಡದೆ ಹೋದರೆ ಅಂಥಾ ಕಾಲೇಜುಗಳಿಗೆ ಕೊಟ್ಟಿರತಕ್ಕಂಥಾ ರೆಕಗ್ನಿಷನ್ ಅನ್ನು ವಿತ್‌ಡ್ರಾ ಮಾಡಿಕೊಳ್ಳುತ್ತೀರಾ ಇಲ್ಲದೇ ಹೋದರೆ ಮುಂದಾದರೂ ಕೂಡ ಅವರು ಸರ್ಕಾರದ ಈ ಆದೇಶವನ್ನು ಸರಿಯಾಗಿ ಪಾಲಿಸಬೇಕು ಅಂತ ಒಂದು ಆದೇಶ ಕೊಡುತ್ತೀರಾ, ಇಲ್ಲದೇ ಹೋದರೆ ಅಂಥಾವರ ಮೇಲೆ ಉಗ್ರ ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆ ಎನ್ನುವ ಒಂದು ಭರವಸೆ ಕೊಡುತ್ತೀರಾ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಆ ಆದೇಶ ಈಗಲೇ ಇದೆ. ಅದನ್ನು ಸರಿಯಾಗಿ ಪಾಲಿಸುತ್ತಾರೆ ಅನ್ನುವ ನಂಬಿಕೆ ನನಗೆ ಇದೆ.

MR. SPEAKER.—Now held over question No. 18 of 10-2-1979.

Thermal Project at Raichur

18 SRI C. APPAJI (Kanakapur).—Will the Chief Minister be pleased to state :—

(a) when the work of the State Thermal Project at Raichur is to commence ;

(b) when it is likely to be commissioned

(c) what is the cost and the capacity of power generation ;

(d) whether there will be Central assistance for the project and if so, how much?

SRI D. DEVARAJ URS (Chief Minister)

(a) The work on the Thermal Plant at Raichur has been recently taken up.